**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 78/2019**

ಪ್ರಾ.ಸಾ. 14

ಚಾ.ಸಾ. 26

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 13.01.2025**

| | |
|---|---|
| ಸಾಕ್ಷಿದಾರರ ಹೆಸರು | ರವಿಕುಮಾರ್.ಎಂ. |
| ತಂದೆಯ ಹೆಸರು | ಮುದ್ದು ಮಾದಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಪೊಲೀಸ್ ಇನ್ಸ್ ಪೆಕ್ಟರ್, ಮಳವಳ್ಳಿ ಟೌನ್ ಪೊಲೀಸ್ ಠಾಣೆ |
| ವಾಸ | ಮಳವಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು ದಿನಾಂಕ 01.06.2016 ರಿಂದ 13.11.2017 ರವರೆಗೆ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

.2. ದಿನಾಂಕ 18.11.2016 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಬಂದ ಎಂ ಎಲ್ ಸಿ ಮೆಮೋವನ್ನು ಸ್ವೀಕರಿಸಿ ಆಸ್ಪತ್ರೆಗೆ ಭೇಟಿ ನೀಡಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ.1 ರವರ ಹೇಳಿಕೆಯನ್ನು ವೈದ್ಯರ ಸಮಕ್ಷಮ ಸಂಜೆ 4.30 ರಿಂದ 5.30 ರವರೆಗೆ ಮಾಡಿಕೊಂಡು, ಠಾಣೆಗೆ ಮರಳಿ ಅದನ್ನು ನಮ್ಮ ಠಾಣಾ ಗುನ್ನಾ ನಂ.262/2016 ರಲ್ಲಿ ನೋಂದಾಯಿಸಿ ಮೂಲ ಪಿರ್ಯಾದನ್ನು ಪ್ರಥಮ ವರ್ತಮಾನ ವರದಿಯೊಂದಿಗೆ ನ್ಯಾಯಾಲಯಕ್ಕೆ ಸಿಬ್ಬಂದಿರವರ ಮುಖಾಂತರ ಸಲ್ಲಿಸಿದ್ದು ಹಾಗೂ ನಕಲುಗಳನ್ನು ಮೇಲಾಧಿಕಾರಿಗಳಿಗೂ ಸಲ್ಲಿಸಿರುತ್ತೇನೆ. ನಿಪಿ.1 ಪಿರ್ಯಾದಿನಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.1 ಸಿ ಎಂದು ಗುರುತಿಸಲಾಗಿದೆ. ವೈದ್ಯರ ಹಿಂಬರಹ ನಿಪಿ.1 ಡಿ ಎಂದು ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9 ಎ ಎಂದು ಗುರುತಿಸಲಾಗಿದೆ. ನಂತರ ಘೋರ ಪ್ರಕರಣ ಆದ್ದರಿಂದ ಮುಂದಿನ ತನಿಖೆಯನ್ನು ಚಾಸಾ.27 ರವರಿಗೆ ವಹಿಸಿಕೊಟ್ಟಿರುತ್ತೇನೆ.

.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ವಿ ಆರ್ ವಕೀಲರಿಂದಃ</u>**

1. ದಿನಾಂಕ 18.11.2016 ರಂದು ಬೆಳಗ್ಗೆ ಠಾಣೆಗೆ ಬಂದಿದ್ದು ನಿಖರವಾದ ಸಮಯ ಠಾಣಾ ದಿನಚರಿ ನೋಡಿ ಹೇಳಬೇಕಾಗುತ್ತದೆ. ಆಸ್ಪತ್ರೆಗೆ ನಾನು ಹಾಗೂ ಚಾಸಾ.23 ರವರು ಹೋಗಿದ್ದೆವು.

2. "ಚಾಸಾ.1 ರವರ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೇ 1 ನೇ ಆರೋಪಿ ಬೆಳಗ್ಗೆ 9.00 ರಿಂದ 9.30 ಗಂಟೆ ಸಮಯದಲ್ಲಿ ಚಾಸಾ.1 ರವರ ಮನೆಗೆ ಬಂದರು, ಆಗ ಚಾಸಾ.20 ಹಾಗೂ 21 ರವರು ನನ್ನ ಜೊತೆ ನೀನು ಏಕೆ ತವರು ಮನೆಗೆ ಹೋಗಿದ್ದೆ ಎಂದು ನನಗೆ ಬೈಯುತ್ತಾ ಇದ್ದರು, ನನ್ನ ಅತ್ತೆ 2 ನೇ ಆರೋಪಿ ಜುಟ್ಟನ್ನು ಹಿಡಿದುಕೊಂಡು ಧರಧರನೆ ಎಳೆದುಕೊಂಡು ಬಂದರು, ಆಗ ನಾನು ಹೊರಗಡೆ ಬಾಗಿಲ ಚಿಲಕ ತೆಗೆದು ಹೊರಗೆ ಓಡಿ ಬಂದೆ, ಆಗ ಜನರು ಮನೆಯೊಳಗೆ ಓಡಿ ಹೋದರು" ಎಂದು ನಿಪಿ.1 ದೂರಿನಲ್ಲಿ ಆ ರೀತಿ ಹೇಳಿಲ್ಲ.

3. ದೂರು ಕೊಡುವಾಗ ಚಾಸಾ.1 ರವರ ಬಟ್ಟೆ ಬದಲಾಯಿಸಿದರೋ ಇಲ್ಲವೋ ಎಂದು ನನಗೆ ನೆನಪಿಲ್ಲ, ಆದರೆ ಸಿಬ್ಬಂದಿಯವರು ತನಿಖಾಧಿಕಾರಿಗೆ ಹಾಜರು ಮಾಡಿದ್ದಾರೆ. ಚಾಸಾ.1 ರವರ ಬಟ್ಟೆಯನ್ನು ನನ್ನ ಸಮಕ್ಷಮ ನೀಡಿರುವುದಿಲ್ಲ, ನನ್ನ ಸಿಬ್ಬಂದಿಯವರಿಗೆ ನೀಡಿರುತ್ತಾರೆ. ಬಟ್ಟೆ ಜಪ್ತು ಮಾಡಿಕೊಂಡ ಬಗ್ಗೆ ಆಸ್ಪತ್ರೆಯಲ್ಲಿ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಸದರಿ ದಿನಾಂಕದಂದು ನಾನಾಗಲೀ, ಸಿಬ್ಬಂದಿಯಾಗಲೀ ಆಸ್ಪತ್ರೆಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ನಿಪಿ.1 ಅನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ. ಸುಳ್ಳು ದೂರನ್ನು ನೋಂದಾಯಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.